ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕಿಂತ ಮುಂಚೆ ಮುಖ್ಯವಾದ ವಿಷಯ ಏನೆಂದರೆ ನಿನ್ನೆ ದಿವಸ ಜೂನಿಯರ್ ಕಾಲೇಜ್ ಲೆಕ್ಚರರ್ಸ್ ಏನಿದ್ದಾರೆ ಅವರು ಉರುಳು ಸೇವೆ ಮಾಡಿಕೊಂಡು.....

ಅಧ್ಯಕ್ಷರು.—ಆಮೇಲೆ ಕೇಳಿ.

ನಿಯಮ ೩೩ಳಿರ ಮೇರೆಗೆ (೧) ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಅವರು ಎಂಟು ದಿನಗಳಿಂದ ಇಲ್ಲಿ ಅಡ್ಡಾಡುತ್ತಿದ್ದಾರೆ. ಇದು ೮೫೦ ಜನರ ಸಮಸ್ಯೆ ಇದೆ. ಅದಕ್ಕೆ ಸರ್ಕಾರ ಏನಾದರೂ ಪರಿಹಾರ ನೀಡಬೇಕು. ಅವರನ್ನು ಖಾಯಂ ಮಾಡಬೇಕು. ಮಾರ್ಚಿ ಕೊನೆಗೆ ಇವರುಗಳನ್ನು ಟರ್ಮಿನೇಟ್ ಮಾಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು,—ಮಾನ್ಯ ಮಂತ್ರಿಗಳು ಹೇಳಿಕೆ ನೀಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಈ ಬಗ್ಗೆ ಸೂಚನೆ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಿಮ್ಮ ಹೆಸರು ಬರುತ್ತದೆ. ತಾವು ಹೇಳಿದ್ದೀರಿ ಮಾನ್ಯ ಮಂತ್ರಿಗಳು ಈಗ ಉತ್ತರ ಹೇಳುತ್ತಾರೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕ ಶಿಕ್ಷಕರಿಗೆ ಗಾಬರಿ ಇತ್ತು. ಅವರನ್ನು ಏಪ್ರಿಲ್ ಹತ್ತಕ್ಕೆ ರಿಲೀವ್ ಮಾಡುತ್ತೇವೆಂದು. ನಿಯಮಾವಳಿ ಪ್ರಕಾರ ಪ್ರತಿ ವರ್ಷ ಅದೇ ರೀತಿ ಮಾಡುತ್ತಿದ್ದೆವು. ಮಾರ್ಚ್ ಕೊನೆಗೆ ರಿಲೀವ್ ಮಾಡಿ ಮತ್ತೆ ರಜ ಕಳೆದ ಮೇಲೆ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಇತ್ತು.

ಆದರೆ ಈ ಸಾರಿ ಅವರನ್ನು ರಿಲೀವ್ ಮಾಡಕೂಡದು ಎಂದು ಆರ್ಡರ್ ಮಾಡಿದ್ದೇವೆ. ರಿಲೀವ್ ಮಾಡುವುದಿಲ್ಲ. ಅದರ ಜೊತೆಗೆ ಗುತ್ತಿಗೆ ಆಧಾರದ ಮೇಲೆ ಏನು ಕೆಲಸ ಮಾಡುತ್ತಿದ್ದಾರೆ ಅದನ್ನು ಖಾಯಂ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶಾಸನ ರಚನಾಕಾರ್ಯ ಕಲಾಪಗಳು

೧೯೮೭ನೇ ಇಸವಿಯ ಕರ್ನಾಟಕ ಮನರಂಜನೆ ತೆರಿಗೆ (೩ನೇ ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

೩-೦೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜುಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮನರಂಜನೆ ತೆರಿಗೆ (೩ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಚರ್ಚೆಯ ಮೇಲೆ ಭಾಗವಹಿಸಿ ಉತ್ತರ ಕೊಡುವಾಗ ಮತ್ತು ತದನಂತರ ಅನೇಕ ಮಸೂದೆಗಳ ಬಗ್ಗೆ ಚರ್ಚೆ ನಡೆಯುತಕ್ಕ ಸಮಯದಲ್ಲಿ ಕೆಲವು ರಿಯಾಯಿತಿಗಳನ್ನು ಘೋಷಿಸಿದ್ದರು. ಅದರ ಪೈಕಿ ಷೋ ಟ್ಯಾಕ್ಸ್ ರಿಯಾಯಿತಿಯೂ ಒಂದು. ಈಗ ವಿಧಿಸಲು ಉದ್ದೇಶಪಟ್ಟಿದ್ದ ೪ ಪರ್ಸೆಂಟ್ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನು ತೆಗೆದುಹಾಕಿ ಅದರ ಬದಲು ಅವರೇ ಸೂಚಿಸಿರತಕ್ಕ ಷೋ ಟ್ಯಾಕ್ಸ್ ಹಾಕುತ್ತೇವೆಂದು ಈ ಸಭೆಯಲ್ಲಿ ಘೋಷಿಸಿದ್ದರು. ಅದರನುಸಾರವಾಗಿ ಈ ತಿದ್ದುಪಡಿಯನ್ನು ತಂದಿದ್ದೇವೆ.